O.S.No.: 63/2009
P.W.:1

ಈ ದಿನ ದಿಃ 7.12.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ 3 ರಿಂದ 6 ಮತ್ತು 8 ರಿಂದ 10 ಪ್ರತಿವಾದಿ ಪರ ಕೆಬಿಕೆ ವಕೀಲರಿಂದಃ

ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ಹಾಕಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು 30 ವರ್ಷಗಳಿಂದ ಕನಕಪುರದ ಹೌಸಿಂಗ್ ಬೋರ್ಡ್ ನಲ್ಲಿ ವಾಸವಿರುತ್ತೇನೆ.

ಕಾಡೇಗೌಡರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇ ಹೆಂಡತಿ ಕುಳ್ಳಮ್ಮ, ಎರಡನೇ ಹೆಂಡತಿ ಚಾಮಮ್ಮ ಎಂದರೆ ಸರಿ. ಸದರಿ ಕುಳ್ಳಮ್ಮನವರಿಗೆ ಮಾದೇಗೌಡ, ಚಿಕ್ಕೇಗೌಡ ಮತ್ತು ಬುರಮ್ಮ ಎಂಬ ಮಕ್ಕಳು ಎಂದರೆ ಸಾಕ್ಷಿಯು ಅವರಿಗೆ ಬುರಮ್ಮ ಎಂಬ ಮಗಳು ಇರಲಿಲ್ಲ, ಇಬ್ಬರು ಗಂಡು ಮಕ್ಕಳು ಮಾತ್ರ ಎಂದು ನುಡಿಯುತ್ತಾರೆ. ಎರಡನೇ ಹೆಂಡತಿ ಚಾಮಮ್ಮನಿಗೆ ಯಾವುದೇ ಸಂತತಿ ಇರಲಿಲ್ಲ ಎಂದರೆ ಸರಿಯಲ್ಲ. ಮಾದೇಗೌಡ, ಚಿಕ್ಕೇಗೌಡ ಮತ್ತು ಕಾಡೇಗೌಡರವರು ನಾನು 3 ತಿಂಗಳ ಮಗುವಿದ್ದಾಗ ತೀರಿಕೊಂಡಿರುತ್ತಾರೆ. ಚಾಮಮ್ಮನವರಿಗೆ ಮಹದೇವಮ್ಮ ಎಂಬ ಮಗಳು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆಂದರೆ ಸರಿ.

ಮಾದೇಗೌಡರಿಗೆ ಭಾಗ್ಯಮ್ಮ ಮತ್ತು ತುಳಸಮ್ಮ ಎಂಬ ಇಬ್ಬರು ಹೆಂಡತಿಯರು. ಭಾಗ್ಯಮ್ಮನವರ ಒಬ್ಬಳೇ ಮಗಳು ಚಂದ್ರ ತೀರಿಕೊಂಡಿರುತ್ತಾಳೆ. ತುಳಸಮ್ಮನವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ. ಅವರುಗಳೆಂದರೆ ಮಂಜುಳ, ಸುಕನ್ಯ ಮತ್ತು ರಾಜೇಶ. ಸದರಿ ಚಂದ್ರ ಹೊನಗನದೊಡ್ಡಿಯಲ್ಲಿ ತೀರಿಕೊಂಡಿದ್ದು, ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಅವರು ತೀರಿಕೊಂಡಾಗ ನಾನು 9 ವರ್ಷದವಳಿದ್ದೆ.

ಚಿಕ್ಕೇಗೌಡರ ಹೆಂಡತಿ ದೇವಮ್ಮ ಮತ್ತು ಅವರ ಮಕ್ಕಳು ಪಾರ್ವತಮ್ಮ, ಮಾದ, ಲಕ್ಷ್ಮಣ ಉಃಸಣ್ಣಪ್ಪ, ಕರಕಮ್ಮ ಮತ್ತು ಶಿವರುದ್ರೆಗೌಡ. ಕಾಡೇಗೌಡ ಮತ್ತು ಅವರ ಅಣ್ಣ ತಮ್ಮಂದಿರು ಬುರಮ್ಮನ ಮದುವೆಯನ್ನು ಮಾಡಿರುತ್ತಾರೆಂದರೆ ಸರಿಯಲ್ಲ. ಹೊಸಹೊನ್ನಿಗನದೊಡ್ಡಿಯಲ್ಲಿ ನಾನು ವಾಸ ಮಾಡಿಕೊಂಡು ಇರುತ್ತೇನೆಂದು ತೋರಿಸಲು

ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಮದುವೆಯನ್ನು ನನ್ನ ತಂದೆಯವರು ಮಾಡಿರುತ್ತಾರೆ. ನನ್ನ ಮದುವೆಗೆ ಮಾದೇಗೌಡ, ಚಿಕ್ಕೇಗೌಡ ಮತ್ತು ಅವರ ವಾರಸುದಾರರು ಯಾರು ಬಂದಿರಲಿಲ್ಲ ಎಂದರೆ ಸರಿ.

5 ಸರ್ವೆ ನಂಬರ್ ಗಳ ಮೇಲೆ ನಾನು ಈ ದಾವೆಯನ್ನು ಹಾಕಿರುತ್ತೇನೆ. ದಾವಾ ಆಸ್ತಿಗಳನ್ನು ಮಾದೇಗೌಡ ಮತ್ತು ಚಿಕ್ಕೇಗೌಡ ತಲಾ ಅರ್ಧ ಹಂಚಿಕೊಂಡಿರುತ್ತಾರೆಂದರೆ ಸರಿ. ಅವರು ವಿಭಾಗ ಮಾಡಿಕೊಂಡ ನಂತರ ಎಂಆರ್ ನಂ.14/83-84 ಎಂದು ಖಾತೆಯಾಗಿದೆ ಎಂದರೆ ಸರಿ. ನಾನು ಎಸಿ ರವರ ಮುಂದೆ ಸದರಿ ಮ್ಯುಟೇಶನ್ ನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯು ವಜಾಗೊಂಡಿರುತ್ತದೆಂದರೆ ಸಾಕ್ಷಿಯು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರ ಆದೇಶವನ್ನು ನಾನು ಪ್ರಶ್ನಿಸಿ ಯಾವುದೇ ಅಪೀಲು ಮಾಡಿರುವುದಿಲ್ಲ ಎಂದರೆ ಸರಿ.

ಮಾದೇಗೌಡ ಮತ್ತು ಚಿಕ್ಕೇಗೌಡ 1983-84 ಕ್ಕೆ ಹಿಂದಿನಿಂದಲೂ ಬೇರೆ ಬೇರೆ ವಾಸವಿರುತ್ತಾರೆಂದರೆ ಸರಿ. ಅವರುಗಳ ಮನೆಯಲ್ಲಿ ಯಾವುದೇ ಹಬ್ಬ ಹರಿದಿನಗಳಿಗೆ ನನ್ನನ್ನು ಕರೆಯುವುದಿಲ್ಲ ಎಂದರೆ ಸಾಕ್ಷಿಯು ಮೊದಲು ಕರೆಯುತ್ತಿದ್ದರು ನಂತರ ಕರೆಯುವುದಿಲ್ಲ ಎಂದು ನುಡಿಯುತ್ತಾರೆ. ಮಾದೇಗೌಡ ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ. ಚಿಕ್ಕೇಗೌಡರು 2003 ರಲ್ಲಿ ತೀರಿಕೊಂಡಿರುತ್ತಾರೆ. ಮಾದೇಗೌಡರು ತೀರಿಕೊಂಡ ನಂತರ ಅವರ ಹೆಂಡತಿ ಮತ್ತು ಮಕ್ಕಳು ದಾವಾ ಐಟಂ ನಂ.1 ನ್ನು 7 ನೇ ಪ್ರತಿವಾದಿಗೆ ಮನೆತನದ ಅವಶ್ಯಕತೆಗಾಗಿ ಹಾಗೂ ಜೀವನಕ್ಕಾಗಿ ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ಕ್ರಯಪತ್ರವನ್ನು ಪ್ರಶ್ನಿಸಿ ನಾನು ರಾಮನಗರದಲ್ಲಿ ಕೇಸನ್ನು ಹಾಕಿರುತ್ತೇನೆ. ಅದರ ಕೇಸ್ ನಂಬರ್ ನನಗೆ ಗೊತ್ತಿಲ್ಲ.

ನಾನು 18 ವರ್ಷ ಆದ ನಂತರ ದಾವಾ ಆಸ್ತಿಗಳಲ್ಲಿ ಭಾಗವನ್ನು ಕೇಳಿ ಮಾದೇಗೌಡ, ಚಿಕ್ಕೇಗೌಡರಿಗೆ ಯಾವುದೇ ನೋಟೀಸನ್ನು ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಬಾಯಿ ಮಾತಿನಲ್ಲಿ ಕೇಳಿದ್ದು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಊರಿನಲ್ಲಿ ನ್ಯಾಯ ಪಂಚಾಯತಿ ಮಾಡಿಸಿರುತ್ತೇನೆ. ನ್ಯಾಯ ಪಂಚಾಯತಿಯನ್ನು 16-3-2001 ರಲ್ಲಿ ಹೊಸಹೊನಗನದೊಡ್ಡಿಯಲ್ಲಿ ಮಾಡಿಸಿರುತ್ತೇವೆ. ಸದರಿ ಪಂಚಾಯತಿಗೆ ಚಿಕ್ಕೆಗೌಡ, ನನ್ನ ತಂದೆ ಮತ್ತು ಊರಿನ ಗೌಡರು ಸೇರಿದ್ದರು. ನಾನು ಯಾವುದೇ ಪಂಚಾಯತಿ ಮಾಡಿಲ್ಲ ಮತ್ತು ಮಾದೇಗೌಡ ಹಾಗೂ ಚಿಕ್ಕೆಗೌಡರನ್ನು ಎಂದೂ ಭಾಗ ಕೇಳಿರುವುದಿಲ್ಲ ಎಂದರೆ ಸಾಕ್ಷಿಯು ಚಿಕ್ಕೇಗೌಡರಿಗೆ

ಕೇಳಿರುತ್ತೇನೆಂದು ನುಡಿಯುತ್ತಾರೆ. ನಾನು ಚಾಮಮ್ಮನ ವಾರಸುದಾರರಲ್ಲ ಹಾಗೂ ಚಿಕ್ಕೆಗೌಡರಿಗೆ ಸಂಬಂಧಿಕರಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗಳಲ್ಲಿ ಯಾವತ್ತು ಉಳುಮೆ ಮಾಡಿಲ್ಲ ಎಂದರೆ ಸರಿ. ಚಾಮಮ್ಮನಿಗೆ ಮಾದಮ್ಮ ಎಂಬ ಯಾವ ಮಗಳು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮಾದಮ್ಮನಿಗೂ ಮತ್ತು ಚಾಮಮ್ಮನಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಆಗಲೀ ಅಥವಾ ಮಾದೇಗೌಡ ಮತ್ತು ಚಿಕ್ಕೇಗೌಡರ ಕುಟುಂಬದಲ್ಲಿ ಆಗಲೀ ನಾನು ಎಂದೂ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಮಾದೇಗೌಡ ಮತ್ತು ಚಿಕ್ಕೇಗೌಡರಿಗೆ ನಾನು ಸಂಬಂಧಿಕರಲ್ಲ ಎಂದರೆ ಸರಿಯಲ್ಲ.

1983-84 ರಲ್ಲಿ ಭಾಗವಾದ ನಂತರ ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿ ನನಗೂ ಭಾಗ ಬರಬೇಕು ಎಂದು ನುಡಿಯುತ್ತಾರೆ. ನಾನು ಕಾಡೇಗೌಡನ ಮಗಳು ಎಂದು ತೋರಿಸಲು ವಂಶವೃಕ್ಷವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ದಾವಾ ಐಟಂ ನಂ.5 ಮಾದೇಗೌಡ ಬಿನ್ ಸಿದ್ದೇಗೌಡ ಎನ್ನುವವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸದರಿ ಮಾದೇಗೌಡ ಬಿನ್ ಸಿದ್ದೇಗೌಡ ಯಾರು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಮಾದೇಗೌಡ ಗೊತ್ತು ಆದರೆ ಸಿದ್ದೇಗೌಡ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಹಾಜರು ಪಡಿಸಿರುವ ಎಲ್ಲಾ ದಾಖಲೆಗಳು ಮಾದೇಗೌಡ ಮತ್ತು ಚಿಕ್ಕೇಗೌಡರ ಹೆಸರಿನಲ್ಲಿದ್ದು, ನನಗೆ ದಾವಾ ಆಸ್ತಿಗಳಲ್ಲಿ ಯಾವುದೇ ಭಾಗ ಮತ್ತು ಹಕ್ಕು ಇಲ್ಲ ಎಂದರೆ ಸರಿಯಲ್ಲ. 2005ಕ್ಕೆ ಹಿಂದೆ ದಾವಾ ಆಸ್ತಿಗಳೆಲ್ಲವೂ ಮಾರಾಟವಾಗಿರುತ್ತವೆಂದರೆ ಸರಿ ಮತ್ತು ವಿಭಾಗ ಸಹ ಆಗಿರುತ್ತದೆಂದರೆ ಸರಿ. ನಾನು ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕಿಲ್ಲದಿದ್ದರೂ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.